EAT THE BEST
SHREEDEVI SR PLANTAIN LEAF
RESTAURANT
Veg & Non-Veg
Andhra Food
North Indian
Tandoor
1979, Rajkamal Talkies Road, Mysore-1
Tel: 2428034/2420420
We Undertake Outdoor Catering

ಆಂದೋಲನ
ದಿನಪತ್ರಿಕೆ
ಸಂಸ್ಥಾಪಕ ಸಂಪಾದಕ: ರಾಜಶೇಖರ ಕೋಟಿ

THE TASTE YOU LOVE THE NAME YOU TRUST
'ಸ್ಪೆಷಲ್ ಮೈಸೂರ್ ಪಾಕ್'ಗೆ
ಇಂದೇ ಭೇಟಿ ಕೊಡಿ
ನ್ಯೂ ಬಾಂಬೆ ಟಿಫಾನಿಸ್
NEW BOMBAY TIFFANYS
ನಮ್ಮ ವಿಶೇಷತೆಗಳು: ಹೊಸ ಹೊಸ ಬಗೆಯ ಬೆಂಗಾಲಿ ಸ್ವೀಟ್ಸ್, ಮಿಲ್ಕ್ ಕೇಕ್, ಶುದ್ಧ ತುಪ್ಪದಿಂದ ತಯಾರಿಸಿದ ಸಿಹಿ ಮತ್ತು ಖಾರಾ ತಿಂಡಿಗಳು
1771/3 ವಿಕ್ಟೋರಿಯಾ ಕಾಂಪ್ಲೆಕ್ಸ್, ಸಯ್ಯಾಜಿರಾವ್ ರಸ್ತೆ, ಮೈಸೂರು
Contact: : ಮನೀಶ್ ಕುಮಾರ್,
ಮೊ: 9845111886, 4287475

ದೇಶದ ಗಡಿಯಂಚಿನಲ್ಲಿ ಪಾಕ್ ಪ್ರಚೋದಿತ ಉಗ್ರರ ದಾಳಿಗೆ ಬಲಿಯಾದ ಐವರು ಹುತಾತ್ಮ ಯೋಧರಿಗೆ ನಮನ ಸಲ್ಲಿಸುವ ಕಾರ್ಯಕ್ರಮ ಮೈಸೂರು ನ್ಯಾಯಾಲಯ ಮುಂಭಾಗ ಸೋಮವಾರ ನಡೆದಾಗ ಬಾಲಕಿ ಖುಷಿ ಪ್ರಕಾಶ್, ಯೋಧರಿಗೆ ನಮನ ಸಲ್ಲಿಸಿದ ಪರಿ ಇದು.

ಹುತಾತ್ಮ ಯೋಧರಿಗೆ ಪುಟಾಣಿಯ ನಮನ

ಪಾಕ್ ಜತೆ ಕ್ರಿಕೆಟ್ ಇಲ್ಲ

ಉಗ್ರರಿಗೆ ಬೆಂಬಲ, ಕದನ ವಿರಾಮ ಉಲ್ಲಂಘಿಸುವ ಪಾಕ್ ಜತೆ ಭಾರತ ಸದ್ಯಕ್ಕೆ ಕ್ರಿಕೆಟ್ ಪಂದ್ಯ ಆಡುವುದು ಸಾಧ್ಯವಿಲ್ಲ ಎಂದು ಸಚಿವೆ ಸುಷ್ಮಾ ಸ್ವರಾಜ್ ಸ್ಪಷ್ಟವಾಗಿ ಹೇಳಿದ್ದಾರೆ.

ಗರಿಷ್ಠ: ೩೦° । ಕನಿಷ್ಠ: ೧೫°
ಬಿಸಿಲ ತಾಪ ಏರಿಕೆ, ಮಳೆ ಮೋಡಗಳು ದೂರ

ಸಂಪುಟ: ೪೭ ಸಂಚಿಕೆ: ೨, ರಾಷ್ಟ್ರೀಯ ಶಕ ೧೯೩೯ ಶಿಶಿರ–ಪುಷ್ಯ–ಮಾಘ ೧೨, • ಹುಣ್ಣಿಮೆ, ಪಾಡ್ಯ– ಆರ್ದ್ರಾ, ಮಂಗಳವಾರ, ಜ.೨, ೨೦೧೮, ದೂರವಾಣಿ: ೨೪೪೯೫೦೧, ೨೪೪೯೫೦೪, ೨೪೪೯೫೦೫, ಫ್ಯಾಕ್ಸ್: ೨೪೪೯೫೦೩, ಪುಟ : ೧೨, ರೂ. ೩

ಇಂದು ಒಪಿಡಿ ಬಂದ್

ಖಾಸಗಿ ಆಸ್ಪತ್ರೆಗಳಲ್ಲಿ ಹೊರರೋಗಿ ಸೇವೆ ಇಲ್ಲ; ತುರ್ತು ಸೇವೆಯಷ್ಟೆ ಲಭ್ಯ

ಹೊಸದಿಲ್ಲಿ,ಜ.೧– ಕೇಂದ್ರ ಸರ್ಕಾರದ ಪ್ರಸ್ತಾವಿತ 'ರಾಷ್ಟ್ರೀಯ ವೈದ್ಯಕೀಯ ಆಯೋಗ–೨೦೧೭'ರ (ಎನ್‌ಎಂಸಿ) ವಿಧೇಯಕ ವಿರೋಧಿಸಿ ಮಂಗಳವಾರ ರಾಜ್ಯಾದ್ಯಂತ ಖಾಸಗಿ ಆಸ್ಪತ್ರೆಗಳಲ್ಲಿನ ಒಪಿಡಿ (ಹೊರ ರೋಗಿಗಳ ಚಿಕಿತ್ಸಾ ವಿಭಾಗ) ಬಂದ್ ಆಗಲಿದೆ.

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ.ನಡ್ಡಾ ಅವರೊಂದಿಗೆ ಭಾರತೀಯ ವೈದ್ಯಕೀಯ ಮಂಡಳಿ (ಎಂಸಿಐ) ಸೋಮವಾರ ನಡೆಸಿದ ಮಾತುಕತೆ ವಿಫಲವಾಗಿದೆ. ಹಾಗಾಗಿ ಮಂಗಳವಾರ ಬೆಳಿಗ್ಗೆ ೬ರಿಂದ ಸಂಜೆ ೬ರವರೆಗೆ ಎಲ್ಲಾ ಖಾಸಗಿ ಆಸ್ಪತ್ರೆಗಳ ಒಪಿಡಿ ಬಂದ್ ಮಾಡಿ ಶಾಂತಿಯುತವಾಗಿ ಹೋರಾಟ ನಡೆಸಲಾಗುವುದು. ತುರ್ತು ಸೇವೆಗಳ ವಿಭಾಗ ಎಂದಿನಂತೆ ಕಾರ್ಯ ನಿರ್ವಹಿಸಲಿದೆ ಎಂದು ಎಂಸಿಐ ಕರ್ನಾಟಕ ಘಟಕದ ಅಧ್ಯಕ್ಷ ಡಾ.ಎಚ್.ಎನ್.ರವೀಂದ್ರ ತಿಳಿಸಿದರು.

'ಆಂದೋಲನ'ದೊಂದಿಗೆ ಸೋಮವಾರ ಮಾತನಾಡಿದ ಅವರು, ಮೊದಲ ಹಂತವಾಗಿ ಒಪಿಡಿಗಳನ್ನು ಬಂದ್ ಮಾಡಿ ಪ್ರತಿಭಟನೆ ವ್ಯಕ್ತಪಡಿಸುತ್ತಿದ್ದೇವೆ. ಕೇಂದ್ರ ಸರ್ಕಾರ ಇದಕ್ಕೆ ಮಣಿಯದಿದ್ದರೆ ಪ್ರತಿಭಟನೆಯನ್ನು ಹಂತ ಹಂತವಾಗಿ ತೀವ್ರಗೊಳಿಸಲಾಗುವುದು ಎಂದರು.

ನೂತನ ರಾಷ್ಟ್ರೀಯ ವೈದ್ಯಕೀಯ ಆಯೋಗದ ವಿಧೇಯಕ ಜಾರಿಯು ದೇಶದ ವೈದ್ಯ ಚಿಕಿತ್ಸಾ ವ್ಯವಸ್ಥೆಗೆ ಮಾತ್ರವಲ್ಲದೆ ಜನರ ಆರೋಗ್ಯ ಸೇವೆಗೂ ಮಾರಕ ವಾಗಲಿದೆ. ಇಂಥ ಪ್ರಯತ್ನ ಕೈಬಿಡುವಂತೆ ಒತ್ತಾಯಿಸಲಾಗಿದೆ ಎಂದು ಭಾರತೀಯ ವೈದ್ಯಕೀಯ ಪರಿಷತ್ (ಎಂಸಿಐ) ಕಾರ್ಯಕಾರಿ ಸಮಿತಿ ಸದಸ್ಯರೂ ಆದ ಡಾ.ಎಚ್.ಎನ್. ರವೀಂದ್ರ ತಿಳಿಸಿದರು.

ಕರಾಳ ದಿನ: ಈ ಕಾಯಿದೆ ಜಾರಿಗೆ ಬಂದ ದಿನ ವೈದ್ಯಕೀಯ ಕ್ಷೇತ್ರಕ್ಕೆ ಕರಾಳ ದಿನವಾಗಲಿದೆ. ಒಂದು ವೇಳೆ ಎಂಸಿಐನಲ್ಲಿ ಲೋಪಗಳಿದ್ದರೆ ಅದಕ್ಕೆ ಅಗತ್ಯವಾದ ತಿದ್ದುಪಡಿಗಳನ್ನು ತರಬಹುದಿತ್ತು. ಆದರೆ, ಈ ಕಾಯಿದೆಯು ವೈದ್ಯಕೀಯ ಶಿಕ್ಷಣದ ಗುಣಮಟ್ಟವನ್ನು ಪ್ರಪಾತಕ್ಕೆ ತಳ್ಳಲಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಐದೂವರೆ ವರ್ಷಗಳ ವೈದ್ಯಕೀಯ ಪದವಿ ಪೂರ್ಣಗೊಳಿಸಿದವರು ನೀಡುವ ಚಿಕಿತ್ಸೆ, ಅಲೋಪಥಿ ಚಿಕಿತ್ಸಾ ಪದ್ಧತಿಯ ಅಧ್ಯಯನ ನಡೆಸದೇ ಪೂರಕ ಕೋರ್ಸ್‌ಗಳನ್ನು (ಬ್ರಿಡ್ಜ್ ಕೋರ್ಸ್) ವ್ಯಾಸಂಗ ಮಾಡಿದವರು ನೀಡುವ ಅಲೋಪಥಿ ಚಿಕಿತ್ಸೆಯೂ ಒಂದೇ ರೀತಿ ಇರಲು ಸಾಧ್ಯವೇ? ಎಂದು ಅವರು ಪ್ರಶ್ನಿಸಿದರು.

ಖಂಡನೀಯ: ಭ್ರಷ್ಟಾಚಾರ ಪ್ರಕರಣವನ್ನು ಸಿಬಿಐಗೆ ವಹಿಸಲಿ, ಆರೋಪಿಗಳನ್ನು ಜೈಲಿಗೆ ಕಳುಹಿಸಲಿ. ಅದನ್ನು ಬಿಟ್ಟು ಭ್ರಷ್ಟಾಚಾರ ಹೆಚ್ಚಾಗಿದೆ ಎಂಬ ಕಾರಣಕ್ಕೆ ಎಂಸಿಐ ಸಂಸ್ಥೆಯನ್ನೇ ಮುಚ್ಚಿ ಹೊಸದಾಗಿ ಎನ್‌ಎಂಸಿ ರಚನೆಗೆ ಮುಂದಾಗಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆದರೆ, ಎನ್‌ಎಂಸಿ ಕಾಯಿದೆಯಲ್ಲಿ ಬಂದರೆ ಮತ್ತಷ್ಟು ಭ್ರಷ್ಟಾಚಾರಕ್ಕೆ ಅವಕಾಶ ಕಲ್ಪಿಸುವ ಅಂಶಗಳಿವೆ. ಮುಖ್ಯವಾಗಿ ಎನ್‌ಎಂಸಿ ಅಧೀನದಲ್ಲೇ ಪದವಿ ವೈದ್ಯಕೀಯ ಶಿಕ್ಷಣ ಮಂಡಳಿ, ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಮಂಡಳಿ, ವೈದ್ಯಕೀಯ ಮೌಲ್ಯಮಾಪನ ಮಂಡಳಿ ಹಾಗೂ ವೈದ್ಯಕೀಯ ನೋಂದಣಿ ಮಂಡಳಿ ಎಂಬ ೪ ಸಂಸ್ಥೆ ಗಳನ್ನು ಸ್ಥಾಪಿಸಲಾಗುತ್ತದೆ.

⏭ ೫


• 'ರಾಷ್ಟ್ರೀಯ ವೈದ್ಯಕೀಯ ಆಯೋಗ' ರಚನೆಗೆ ಎಂಸಿಐ ತೀವ್ರ ವಿರೋಧ
• ಕೇಂದ್ರ ಆರೋಗ್ಯ ಸಚಿವರೊಂದಿಗಿನ ಐಎಂಎ ಮಾತುಕತೆ ವಿಫಲ
• ಎನ್‌ಎಂಸಿ ರಚನೆಯಾದರೆ ಭ್ರಷ್ಟಾಚಾರ ಹೆಚ್ಚಳದ ಆತಂಕ
• ವೈದ್ಯ ವಿದ್ಯಾರ್ಥಿಗಳಿಗೆ ಮಾರಕ; ಪ್ರಜಾತಂತ್ರ ವ್ಯವಸ್ಥೆಗೆ ಪೆಟ್ಟು
ಕೃಪೆ: ಗೂಗಲ್

ನೀತಿ ಆಯೋಗ 'ರಾಷ್ಟ್ರೀಯ ವೈದ್ಯಕೀಯ ಆಯೋಗ' (ಎನ್‌ಎಂಸಿ) ಸ್ಥಾಪನೆಗೆ ಸಲಹೆ ನೀಡಿರುವ ಹಿನ್ನೆಲೆಯಲ್ಲಿ ಕೇಂದ್ರ ಆರೋಗ್ಯ ಸಚಿವರು ಲೋಕಸಭೆಯಲ್ಲಿ ಶುಕ್ರವಾರ ಕರಡು ವಿಧೇಯಕ ಮಂಡಿಸಿದ್ದು, ಇದು ಮಂಗಳವಾರ ಸದನದಲ್ಲಿ ಚರ್ಚೆಗೆ ಬರಲಿದೆ. ಹಾಗಾಗಿ ಭಾರತೀಯ ವೈದ್ಯ ಪರಿಷತ್‌ನ ಕೋರ್ ಸಮಿತಿ ಭಾನುವಾರ ಹೊಸದಿಲ್ಲಿಯಲ್ಲಿ ಸಭೆ ನಡೆಸಿ ಒಪಿಡಿ ಬಂದ್ ಮೂಲಕ ಎನ್‌ಎಂಸಿ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸುವ ನಿರ್ಧಾರಕ್ಕೆ ಬಂದಿದೆ.

–ಡಾ.ಎಚ್.ಎನ್.ರವೀಂದ್ರ

ಹೊಸವರ್ಷ ಸಂಭ್ರಮದಲ್ಲಿ ಅವಘಡ: ೫ ಜೀವಬಲಿ

ಹುಣಸೂರು ಬನ್ನಿಕುಪ್ಪೆ ಗೇಟ್ ಬಳಿ ಸೋಮವಾರ ಬೆಳಗ್ಗೆ ೨ ಕಾರು ಮತ್ತು ದ್ವಿಚಕ್ರ ವಾಹನ ನಡುವಿನ ಸರಣಿ ಅಪಘಾತದಲ್ಲಿ ಖಾಸಗಿ ಶಾಲೆ ಮುಖ್ಯ ಶಿಕ್ಷಕರೊಬ್ಬರು ಅಸು ನೀಗಿದ ಸ್ಥಳವನ್ನು ಕುತೂಹಲದಿಂದ ವೀಕ್ಷಿಸುತ್ತಿರುವ ಜನರು.

ಮೈಸೂರು,ಜ.೧– ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ಹೊಸ ವರ್ಷವನ್ನು ಸಂಭ್ರಮದಿಂದ ಸ್ವಾಗತಿಸಲು ಹೊರಟವರಲ್ಲಿ ಐವರು ಜೀವ ಕಳೆದುಕೊಂಡಿದ್ದಾರೆ.

ಒಬ್ಬ ಯುವಕ ಸ್ನೇಹಿತರೊಂದಿಗಿನ ಜಗಳದಲ್ಲಿ ಚೂರಿ ಇರಿತಕ್ಕೆ ಬಲಿಯಾಗಿದ್ದರೆ, ಉಳಿದ ನಾಲ್ವರು ಪ್ರತ್ಯೇಕ ಅಪಘಾತಗಳಲ್ಲಿ ಸಾವಿಗೀಡಾಗಿದ್ದಾರೆ. ಐವರು ಗಂಭೀರವಾಗಿ ಗಾಯಗೊಂಡು ಆಸ್ಪತ್ರೆ ಸೇರಿದ್ದಾರೆ. ಇವರ ಕುಟುಂಬಗಳಲ್ಲಿ ಹೊಸ ವರ್ಷ ಆಚರಣೆಯ ಖುಷಿ ಕಳೆದುಹೋಗಿದ್ದು, ಪೋಷಕರು, ಬಂಧುಗಳು ದುಃಖದಲ್ಲಿ ಮುಳುಗಿದ್ದಾರೆ.

ಪಾಂಡವಪುರದಲ್ಲಿ ಇರಿತ: ತಾಲ್ಲೂಕಿನ ಹೊನಗಾನ ಹಳ್ಳಿಯ ಹೊರವಲಯದ ಕೆರೆಯ ಬಳಿ ಭಾನುವಾರ ಮಧ್ಯರಾತ್ರಿ ಹೊಸ ವರ್ಷದ ಸಂಭ್ರಮಾಚರಣೆ ವೇಳೆ ಯುವಕರ ಮಧ್ಯೆ ಘರ್ಷಣೆಯಾಗಿದೆ. ಇಬ್ಬರು ಯುವಕರಿಗೆ ಚಾಕುವಿನಿಂದ ಇರಿಯಲಾಗಿದೆ. ಪರಿಣಾಮ ಒಬ್ಬ ಸಾವಿಗೀಡಾಗಿದ್ದು, ಮತ್ತೊಬ್ಬ ಗಂಭೀರವಾಗಿ ಗಾಯಗೊಂಡಿದ್ದಾನೆ.

ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಗ್ರಾಮದ ಶಿವಕುಮಾರ್ (೨೭) ಚಾಕು ಇರಿತದಿಂದ ಸಾವನ್ನಪ್ಪಿದ ಯುವಕ. ಶಶಿ ಎಂಬಾತ ಗಂಭೀರವಾಗಿ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾನೆ.

ಈ ಹಿಂದೆ ಶಿವಕುಮಾರ್, ಶಶಿ ಹಾಗೂ ಪ್ರತಾಪ್ ನಡುವೆ ಕೆರೆಯಲ್ಲಿ ಮೀನು ಹಿಡಿಯುವ ವಿಚಾರವಾಗಿ ಗಲಾಟೆಯಾಗಿತ್ತು. ವೈಷಮ್ಯ ಮುಂದುವರಿದಿತ್ತು. ಭಾನುವಾರ ಮಧ್ಯರಾತ್ರಿ ಹೊಸವರ್ಷ ಆಚರಣೆ ಮಾಡುತ್ತಿದ್ದಾಗ ಹಳೆ ವಿಚಾರ ಪ್ರಸ್ತಾಪವಾಗಿ ಶಿವಕುಮಾರ್, ಶಶಿ ಹಾಗೂ ಪ್ರತಾಪ್ ಸೇರಿದಂತೆ ೭ ಯುವಕರ ಮಧ್ಯೆ ಭಾರೀ ಗಲಾಟೆ ನಡೆದಿದೆ. ಈ ವೇಳೆ ಶಿವಕುಮಾರ್ ಹಾಗೂ ಶಶಿ ಹೊಟ್ಟೆಗೆ ಚಾಕುವಿನಿಂದ ಇರಿದ ಗುಂಪು ಪರಾರಿಯಾಗಿದೆ. ತೀವ್ರವಾಗಿ ಗಾಯಗೊಂಡಿದ್ದ ಯುವಕರಿಬ್ಬರೂ ರಕ್ತದ ಮಡುವಿನಲ್ಲಿ ನರಳುತ್ತಾ ಬಿದ್ದಿದ್ದಾರೆ.

ಸುದ್ದಿ ತಿಳಿದು ಸ್ಥಳಕ್ಕಾಗಮಿಸಿದ ಸಂಬಂಧಿಕರು ಶಿವಕುಮಾರ್, ಶಶಿಯನ್ನು ಆಸ್ಪತ್ರೆಗೆ ಕರೆದೊಯ್ಯಲು ಯತ್ನಿಸಿದ್ದಾರೆ.

⏭ ೮

- ■ ಪಾಂಡವಪುರದಲ್ಲಿ ಹೊಸ ವರ್ಷ ಆಚರಣೆಯಲ್ಲಿ ಯುವಕರ ಗಲಾಟೆ; ಇರಿತಕ್ಕೆ ಒಬ್ಬ ಬಲಿ, ಮತ್ತೊಬ್ಬ ಗಂಭೀರ
- ■ ಕಲ್ಕುಂದ ಗೇಟ್ ಬಳಿ ವಿದ್ಯುತ್ ಕಂಬಕ್ಕೆ ಬೈಕ್ ಡಿಕ್ಕಿ; ಹೊಸವರ್ಷ ಸಂಭ್ರಮದಲ್ಲಿದ್ದ ಯುವಕರಿಬ್ಬರ ಸಾವು
- ■ ಬನ್ನಿಕುಪ್ಪೆ ಗೇಟ್ ಬಳಿ ೨ ಕಾರು, ಬೈಕ್ ನಡುವೆ ಅಪಘಾತ; ಹಿರಿಕ್ಯಾತನಹಳ್ಳಿ ಮುಖ್ಯ ಶಿಕ್ಷಕ ಸಾವು
- ■ ಅಪಘಾತದಲ್ಲಿ ಗಾಯಗೊಂಡಿದ್ದ ಕಾರಿಹುಂಡಿ ಯುವಕ ಮೈಸೂರಿನ ಆಸ್ಪತ್ರೆಯಲ್ಲಿ ಕೊನೆಯುಸಿರು

ಪ್ರತಿ ತಾಲ್ಲೂಕಿಗೆ ೫ ಕೋಟಿ ರೂ.

ಜನವರಿಯಲ್ಲೇ ಹೊಸ ೫೦ ತಾಲ್ಲೂಕುಗಳೂ ಕಾರ್ಯಾರಂಭ: ಕಂದಾಯ ಸಚಿವ ಕಾಗೋಡು

ಬೆಂಗಳೂರು,ಜ.೧– ಹೊಸ ೫೦ ತಾಲ್ಲೂಕುಗಳು ಜನವರಿಯಲ್ಲೇ ಕಾರ್ಯಾರಂಭ ಮಾಡಲಿವೆ. ಪ್ರತಿ ತಾಲ್ಲೂಕಿಗೂ ೫ ಕೋಟಿ ರೂ.ನಂತೆ ಒಟ್ಟು ೨೫೦ ಕೋಟಿ ರೂ. ಬಿಡುಗಡೆ ಮಾಡಲಾಗುವುದು ಎಂದು ಕಂದಾಯ ಸಚಿವ ಕಾಗೋಡು ತಿಮ್ಮಪ್ಪ ಹೇಳಿದ್ದಾರೆ.

ವಿಧಾನಸೌಧದಲ್ಲಿ ಸೋಮವಾರ ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರ ಜತೆ ಮಾತನಾಡಿದ ಅವರು, ಹೊಸದಾದ ಮೂರ್‍ನಾಲ್ಕು ತಾಲ್ಲೂಕುಗಳನ್ನು ಹೊರತುಪಡಿಸಿದರೆ ಉಳಿದೆಲ್ಲ ತಾಲ್ಲೂಕುಗಳಲ್ಲಿ ಮೂಲಭೂತ ಸೌಕರ್ಯಗಳಿವೆ. ಹಾಗಾಗಿ ಹೊಸ ತಾಲ್ಲೂಕುಗಳು ಇದೇ ತಿಂಗಳಲ್ಲಿ ಕಾರ್ಯಾರಂಭ ಮಾಡಲು ಯಾವ ತೊಂದರೆಯೂ ಇಲ್ಲ ಎಂದರು.

ತಹಸಿಲ್ದಾರ್ ಕಚೇರಿ ಸೇರಿದಂತೆ ಹೊಸ ತಾಲ್ಲೂಕುಗಳ ರಚನೆಗೆ ಅಗತ್ಯವಾದ ಎಲ್ಲ ಸೌಲಭ್ಯಗಳು ಇವೆ.

⏭ ೫

ಕಾಯ್ದೆಗೆ ತಿದ್ದುಪಡಿ

ಇನಾಂ ಭೂಮಿಯಲ್ಲಿ ಸಾಗುವಳಿ ಮಾಡುತ್ತಿದ್ದರೂ ಅರಿವಿಲ್ಲದೇ ಸದರಿ ಭೂಮಿಗೆ ಅರ್ಜಿ ಹಾಕದ ಜನರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಇನಾಂ ರದ್ದತಿ ಕಾಯ್ದೆಗೆ ತಿದ್ದುಪಡಿ ತರಲು ನಿರ್ಧರಿಸಲಾಗಿದೆ. ಮುಂದಿನ ವಿಧಾನಮಂಡಲ ಅಧಿವೇಶನದಲ್ಲಿ ತಿದ್ದುಪಡಿ ಕಾಯ್ದೆ ಮಂಡಿಸಲಾಗುವುದು. ನಂತರ ಉಳುವವರೇ ಭೂಮಿ ಪಡೆಯಲು ಅರ್ಜಿಯನ್ನು ಸಲ್ಲಿಸಬಹುದು.

–ಕಾಗೋಡು ತಿಮ್ಮಪ್ಪ

ತಾಲ್ಲೂಕು ಆರಂಭ; ಸರಗೂರು ಸಡಗರ

ನಾಡಕಚೇರಿಯೇ ತಾಲ್ಲೂಕು ಕಚೇರಿ, ಶಾಲೆಯಲ್ಲೇ ಬಿಇಒ ಕಚೇರಿ

ಸರಗೂರು/ಎಚ್.ಡಿ.ಕೋಟೆ,ಜ.೧– ಎಚ್.ಡಿ.ಕೋಟೆ ತಾಲ್ಲೂಕಿನಿಂದ ಬೇರ್ಪಟ್ಟು ನೂತನ ತಾಲ್ಲೂಕಾಗಿ ಘೋಷಣೆಯಾಗಿರುವ ಸರಗೂರು ತಾಲ್ಲೂಕು ಆಡಳಿತ ಸೋಮವಾರದಿಂದ ಕಾರ್ಯಾರಂಭ ಮಾಡಿದೆ.

ಪಟ್ಟಣದಲ್ಲಿರುವ ನಾಡಕಚೇರಿಯೇ ತಾಲ್ಲೂಕು ಕಚೇರಿಯಾಗಿ ಸದ್ಯಕ್ಕೆ ಬದಲಾಗಿದ್ದು, ಕಚೇರಿ ಕೆಲಸಗಳು ಸೋಮವಾರ ಆರಂಭಗೊಂಡವು. ಸರ್ಕಾರಿ ಬಾಲಕಿಯರ ಶಾಲೆಯಲ್ಲೇ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯೂ ಉದ್ಘಾಟನೆಗೊಂಡಿತು.

ಇದೇ ವೇಳೆ ನೂತನವಾಗಿ ನಿರ್ಮಿಸಿದ್ದ ಪಶು ಆಸ್ಪತ್ರೆ ಕಟ್ಟಡ ಲೋಕಾರ್ಪಣೆಗೊಂಡಿದೆ. ಸಮುದಾಯ ಆರೋಗ್ಯ ಕೇಂದ್ರವು ಸಾರ್ವಜನಿಕ ಆಸ್ಪತ್ರೆಯಾಗಿ ರೂಪುಗೊಂಡಿದೆ.

ಹೊಸ ಫಲಕ: ಪಟ್ಟಣದಲ್ಲಿರುವ ಎಲ್ಲಾ ಸರ್ಕಾರಿ ಕಚೇರಿಗಳ ನಾಮಫಲಕಗಳನ್ನು ತೆರವುಗೊಳಿಸಿ, 'ಸರಗೂರು ತಾಲ್ಲೂಕು' ಎಂದು ಬರೆದು ಹೊಸ ಫಲಕಗಳನ್ನು ಅಳವಡಿಸಲಾಗಿದೆ. ಇನ್ನು ಕೆಲ ಕಟ್ಟಡಗಳಿಗೆ ಸುಣ್ಣ, ಬಣ್ಣ ಬಳಿಯುವ ಕೆಲಸ ಭರದಿಂದ ಸಾಗಿದೆ.

⏭ ೮

ತಾಲ್ಲೂಕು ಕಛೇರಿ ಸರಗೂರು ತಾಲ್ಲೂಕು

೧೧ಕ್ಕೆ ಮುಖ್ಯಮಂತ್ರಿ ಆಗಮನ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜ.೧೧ ರಂದು ಸರಗೂರಿಗೆ ಬರಲಿದ್ದಾರೆ. ಹೊಸ ತಾಲ್ಲೂಕು ಕೇಂದ್ರವಾದ ಸರಗೂರಿನಲ್ಲಿ ಕೆಲವು ಕಚೇರಿಗಳು ಸೋಮವಾರವೇ ಕಾರ್ಯಾರಂಭ ಮಾಡಿದ್ದರೂ, ಜ.೧೧ರಂದು ಸರಗೂರು ತಾಲ್ಲೂಕು ಅಧಿಕೃತವಾಗಿ ಉದ್ಘಾಟನೆ ಆಗಲಿದೆ. ಅದೇ ವೇಳೆ ಬಹುತೇಕ ಸರ್ಕಾರಿ ಕಚೇರಿಗಳು ಪ್ರಾರಂಭವಾಗಲಿವೆ.

ಮೈಸೂರಿನಲ್ಲಿ ಅನಾಮಧೇಯ ಬೈಕ್‌ಗಳ ಸಂಚಾರ!

⏭ ವರದಿ ಪುಟ ೧೧

ಕೈದಿ ಆಸ್ಪತ್ರೆಯಿಂದ ಪರಾರಿ

- ● ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಸಿನಿಮೀಯ ಮಾದರಿ ಘಟನೆ
- ● ಶೌಚಾಲಯದ ಕಿಟಕಿ ಗಾಜು ಒಡೆದು ಹೊರಕ್ಕೆ ಜಿಗಿದು ಪರಾರಿ
- ● ಹೊಸ ವರ್ಷದ ಮೊದಲ ದಿನವೇ ಪೊಲೀಸರಿಗೆ ಶಾಕ್

ಮಡಿಕೇರಿ,ಜ.೧– ವಿಚಾರಣಾಧೀನ ಕೈದಿಯೊಬ್ಬ ಸಿನಿಮೀಯ ಮಾದರಿಯಲ್ಲಿ ಪರಾರಿಯಾಗಿ ಹೊಸ ವರ್ಷದ ದಿನದ ಖುಷಿ ಅನುಭವಿಸಿದ್ದರೆ, ಕಾವಲಿಗಿದ್ದ ಇಬ್ಬರು ಪೊಲೀಸರು ಮಾತ್ರ ವರ್ಷಾಚರಣೆಯ ಸಂಭ್ರಮಕ್ಕೆ ಬದಲು ಶಿಕ್ಷೆಯನ್ನು ಎದುರಿಸುವಂತಾಗಿದೆ.

ಜಿಲ್ಲಾಸ್ಪತ್ರೆಯಲ್ಲಿ ಸೋಮವಾರ ಬೆಳಿಗ್ಗೆ ವಿಚಾರಣಾಧೀನ ಕೈದಿಯೊಬ್ಬ ತಪ್ಪಿಸಿಕೊಂಡು ಪರಾರಿಯಾಗಿರುವ ಘಟನೆ ನಡೆದಿದ್ದು, ಜೈಲು ಅಧಿಕಾರಿಗಳು ಬೆಚ್ಚಿಬಿದ್ದಿದ್ದಾರೆ.

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಸುಂಟಿಕೊಪ್ಪ ನಿವಾಸಿ ಗಣೇಶ್ ಅಲಿಯಾಸ್ ಗಣಪತಿ (೩೦) ಎಂಬಾತನೇ ಕಾವಲಿಗಿದ್ದ ಇಬ್ಬರು ಪೊಲೀಸರನ್ನೂ ವಂಚಿಸಿ ಪರಾರಿಯಾದ ಕೈದಿ.

ಕೆಲ ದಿನಗಳ ಹಿಂದೆ ಸುಂಟಿಕೊಪ್ಪದಲ್ಲಿ ನಡೆದ ಕಳವು ಪ್ರಕರಣದಲ್ಲಿ ಆರೋಪಿಯಾಗಿದ್ದ ಗಣೇಶನನ್ನು ಡಿ.೧೨ರಂದು ಬಂಧಿಸಿದ್ದರು.

⏭ ೫

ಪಿಟೀಲು ವಿದ್ವಾನ್ ಮಹದೇವಪ್ಪ ನಿಧನ

೨ ದಶಕ ಮೈಸೂರು ಸಂಗೀತ ವಲಯದಲ್ಲಿ ಅಪಾರ ಪ್ರೀತಿ, ಗೌರವ, ಮನ್ನಣೆಗಳಿಗೆ ಪಾತ್ರರಾಗಿದ್ದವರು

ಮೈಸೂರು,ಜ.೧– ನಗರದ ಕುವೆಂಪು ನಗರ ನಿವಾಸಿ, ಖ್ಯಾತ ಪಿಟೀಲು ವಿದ್ವಾಂಸ ಎಸ್.ಮಹದೇವಪ್ಪ (೮೭) ಅವರು ಸೋಮವಾರ ಬೆಳಿಗ್ಗೆ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಇತ್ತೀಚೆಗೆ ಅನಾರೋಗ್ಯಕ್ಕೊಳಗಾಗಿದ್ದ ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಬೆಳಿಗ್ಗೆ ೮.೩೦ರಲ್ಲಿ ಕೊನೆಯುಸಿರೆಳೆದರು.

ಅವರು ಪತ್ನಿ ಕಮಲಮ್ಮ, ಪುತ್ರರಾದ ಅಂತಾರಾಷ್ಟ್ರೀಯ ಖ್ಯಾತಿಯ ಪಿಟೀಲು ವಾದಕರಾದ ಎಂ.ನಾಗರಾಜ್ ಮತ್ತು ಎಂ.ಮಂಜುನಾಥ್, ಸೊಸೆಯಂದಿರು, ಮೊಮ್ಮಕ್ಕಳು, ಅಪಾರ ಬಂಧುವರ್ಗ, ಸ್ನೇಹಿತರು, ಅಭಿಮಾನಿಗಳನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ನಗರದ ಲಲಿತಾದ್ರಿಪುರದಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ಸೋಮವಾರ ಸಂಜೆ ೪.೩೦ಕ್ಕೆ ನೆರವೇರಿತು.

⏭ ೫

ಗೌರವ–ಸನ್ಮಾನ
ರಾಜ್ಯೋತ್ಸವ ಪ್ರಶಸ್ತಿ, ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ,
ಕರ್ನಾಟಕ ಕಲಾಶ್ರೀ ಪ್ರಶಸ್ತಿ,
ಸಂಗೀತ ವಿದ್ಯಾನಿಧಿ ಪ್ರಶಸ್ತಿ

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 360
ದೂರವಾಣಿ: 2425156

22 ಕ್ಯಾರೆಟ್ ಚಿನ್ನದ ದರ
ತೊಳಸಿ
THOLASI JEWELS
₹2750
1 ಗ್ರಾಂಗೆ
ಹಿಂದಿನ ದಿನದ ದರ
ಅಶೋಕ ರೋಡ್, ಮೈಸೂರು
Ph: 2521926, 2441926